REVENUE REALISED FROM TRANSPORTATION OF GRANITE & OTHER STONES.

281 - Sri.G.V. Sreeramareddy (Bagepally) : Will the Hon'ble Minister for Mines & Geology be pleased to state?

A) What is the revenue realised by the Government from transportation of Granite and other stones?

Sri. S.D. Jayaram (Minister for Mines & Geology) :

A) The revenue realised by the Government from exploitation of granite and other minor minerals during the last five years is detailed hereunder

Year	Revenue realised (Rs. in lakhs)
1992-93	988.280
1993-94	1757.550
1994-95	3059.760
1995-96	4200.790
1996-97	5913.940
1997-98 Upto June 97	1101.440

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು ಸಚಿವರಲ್ಲಿ ಕಲ್ಲು ಸಾಗಾಣಿಕೆಯಿಂದ ಸರ್ಕಾರಕ್ಕೆ ಪ್ರತಿ ವರ್ಷ ಬಂದ ಆದಾಯವನ್ನು ಕೇಳಿದ್ದೇನೆ. 1996-97ರಲ್ಲಿ ಒಟ್ಟು 5913.940 ಲಕ್ಷ ರೂ.ಗಳ ಆದಾಯ ಬಂದಿದೆ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಹಾಗೆಯೇ 1997-98ನೇ ಸಾಲಿನಲ್ಲಿ ಜೂನ್ 97ರವರೆಗೆ 1101.440 ಲಕ್ಷ ರೂ.ಗಳ ಆದಾಯ ಬಂದಿದೆ ಎಂದು ತಿಳಿಸಲಾಗಿದೆ. ಈ ಸಾಲಿನಲ್ಲಿ ಇನ್ನು ಆರು ತಿಂಗಳು ಮಾತ್ರ ಉಳಿದಿದೆ. ಹೋದ ವರ್ಷದಲ್ಲಿ ಸರ್ಕಾರಕ್ಕೆ ಎಷ್ಟು ಆದಾಯ ಬಂದಿತ್ತೋ, ಈಗ ಆರು ತಿಂಗಳಲ್ಲಿ ಕೇವಲ 1101.440 ಲಕ್ಷ ರೂ. ಮಾತ್ರ ಬಂದಿರುವುದರಿಂದ, ಒಂದು ವರ್ಷ ಪೂರ್ತಿಯಾದರೆ ಎರಡು ಸಾವಿರ ಚಿಲ್ಲರೆ ಆದಾಯ ಬರಬಹುದು. ಏಕೆ ಈ ರೀತಿ ಆದಾಯ ಕಡಿಮೆಯಾಗುತ್ತಿದೆ? ಇದಕ್ಕೆ ಕಾರಣವೇನು? ಒಂದು ವರ್ಷದಲ್ಲಿ ಆದಾಯ ಜಾಸ್ತಿಯಾಗಿ ಮತ್ತೊಂದು ವರ್ಷದಲ್ಲಿ ಆದಾಯ ಕಡಿಮೆಯಾಗುತ್ತಿರುವುದಕ್ಕೆ ಕಾರಣವೇನು? ಎರಡನೆಯದಾಗಿ,

ಈ ಆದಾಯ ಸೋರಿಕೆಯಾಗುತ್ತಿರತಕ್ಕಂತಹ ವಿಧಿ ವಿಧಾನಗಳು ಮತ್ತು ಈ ಸಾಗಾಣಿಕೆ ಮಾಡುತ್ತಿರುವುದರಲ್ಲಿ ಆಗುತ್ತಿರುವಂತಹ ಲೋಪ ದೋಷಗಳು ಸರ್ಕಾರದ ಗಮನಕ್ಕೆ ಬಂದಿವೆಯೇ? ಈ ವರ್ಷದಲ್ಲಿ ಆದಾಯ ಕಡಿಮೆ ಆಗಲಿಕ್ಕೆ ಕಾರಣವೇನು?

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, 1996-97ರ ಮಾರ್ಚ್ ತಿಂಗಳ ಅಂತ್ಯದವರೆಗೆ ಸರ್ಕಾರಕ್ಕೆ ಕಲ್ಲು ಸಾಕಾಣಿಕೆಯಿಂದ 5913.940 ಲಕ್ಷ ರೂ.ಗಳ ಆದಾಯ ಬಂದಿತ್ತು. ಈ ಆರ್ಥಿಕ ವರ್ಷ ಈಗತಾನೇ ಪ್ರಾರಂಭವಾಗಿದೆ. ಇಲ್ಲಿ 1997-98ನೇ ಸಾಲಿಗೆ ಕೊಟ್ಟಿರುವ ವಿವರದಲ್ಲಿ ಏಪ್ರಿಲ್, ಮೇ ಮತ್ತು ಜೂನ್ ತಿಂಗಳುಗಳಲ್ಲಿ ಸರ್ಕಾರಕ್ಕೆ ಬಂದ ಆದಾಯವನ್ನು ತೋರಿಸಲಾಗಿದೆ. ಈಗಲೇ ನಾವು ಆದಾಯ ಕಡಿಮೆಯಾಗಿದೆ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಕೇವಲ ಮೂರು ತಿಂಗಳ ಆದಾಯ 1101.440 ಲಕ್ಷ ರೂ.ಗಳಾಗಿದೆ. ಈ ಮೊತ್ತ ಕನಿಷ್ಟ 1500 ಲಕ್ಷ ರೂ. ಗಳಾದರೂ ಇರಬೇಕಾಗಿತ್ತು ಎಂದು ತಮಗೆ ಅನ್ನಿಸಬಹುದು. ಈ ಆರ್ಥಿಕ ವರ್ಷ ಕೇವಲ ಮೂರು ತಿಂಗಳಾಗಿರುವುದರಿಂದ, ಈಗಲೇ ನಮಗೆ ಆದಾಯ ಕಡಿಮೆಯಾಗಿದೆ ಎಂದು ಹೇಳಲು ಬರುವುದಿಲ್ಲ. ಏಪ್ರಿಲ್ ೧೯೯೮ ರ ನಂತರ ತಾವು ಆದಾಯ ಹೋಲಿಸಿ ಅದು ಕಡಿಮೆ ಇದೆಯೇ ಇಲ್ಲವೋ ಎಂದು ಹೇಳಬಹುದು. ಈ ಆರ್ಥಿಕ ವರ್ಷದಲ್ಲಿ ಇನ್ನೂ ಒಂಭತ್ತು ತಿಂಗಳು ಇದೆ. ಹಾಗಾಗಿ ಆದಾಯ ಕಡಿಮೆಯಾಗಿದೆ ಎಂದು ಹೇಳಲು ಸಾಧ್ಯವಿಲ್ಲ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಮೂರು ತಿಂಗಳಿಗೆ ಆದಾಯ 1101 ಲಕ್ಷ ರೂ.ಗಳಾಗಿದೆ. ಮಾನ್ಯ ಸಚಿವರು ಪೂರ್ತಿ 12 ತಿಂಗಳ ಆದಾಯದ ಲೆಕ್ಕವನ್ನು ಗಣನೆಗೆ ತೆಗೆದುಕೊಳ್ಳಬೇಕೆಂದೂ, ಈ ಆರ್ಥಿಕ ವರ್ಷದಲ್ಲಿ ಇನ್ನೂ ಒಂಭತ್ತು ತಿಂಗಳು ಇದೆ ಎಂದು ತಿಳಿಸಿದ್ದಾರೆ. ಮೂರು ತಿಂಗಳಿಗೆ 1101 ಲಕ್ಷ ರೂ. ಆದಾಯವಾದರೆ, ಅದೇ ಪ್ರಕಾರ ಲೆಕ್ಕ ಹಾಕಿದರೆ ಇನ್ನು 9 ತಿಂಗಳಲ್ಲಿ ಬರುವ ಆದಾಯ ಸೇರಿದರೂ ಅದು ಸುಮಾರು 3300 ಲಕ್ಷ ರೂ. ಗಳು ಮಾತ್ರ ಆದಾಯ ಬರುತ್ತದೆ. ಈ ಮೂರು ತಿಂಗಳಲ್ಲಿ ಆದಾಯ ಬಂದ ಪ್ರಮಾಣದಲ್ಲಿಯೇ ಮುಂದಿನ 9 ತಿಂಗಳಿಗೆ ಲೆಕ್ಕ ಹಾಕುವುದಾದರೆ ಆದಾಯ ಕಡಿಮೆಯಾಗುತ್ತದೆ, ಹೀಗೇಕೆ ಎನ್ನುವುದು ನನ್ನ ಪ್ರಶ್ನೆ. ಈ ರೀತಿ ಆದಾಯ ಕಡಿಮೆಯಾಗಲು ಸಾಗಾಣಿಕೆಯಲ್ಲಿ ಮತ್ತು ಟ್ಯಾಕ್ಸ್ ಅನ್ನು ವಸೂಲಿ ಮಾಡತಕ್ಕಂತಹ ಕ್ರಮದಲ್ಲಿರ ತಕ್ಕಂತಹ ಲೋಪದೋಷಗಳನ್ನು ಸರ್ಕಾರ ಇವತ್ತಿಗೂ ಸರಿಪಡಿಸಲಿಕ್ಕಾಗಿಲ್ಲ. ಏಕೆ ಈ ರೀತಿಯಾಗಿದೆ ಎಂಬುದು ನನ್ನ ಉಪ ಪ್ರಶ್ನೆಯಾಗಿದೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಸರ್ಕಾರ ಗರಿಷ್ಠ ಪ್ರಮಾಣದ ಆದಾಯವನ್ನು ಇದರಲ್ಲಿ ಗಳಿಸಲು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿದೆ. ಹಿಂದಿನ ಸಾಲುಗಳ ಆದಾಯ ನೋಡಿದಲ್ಲಿ ನಮಗೆ ಇದು ಅರ್ಥವಾಗುತ್ತದೆ. 1995-96ನೇ ಸಾಲಿನಲ್ಲಿ ಸರ್ಕಾರದ ಆದಾಯ 4200 ಲಕ್ಷ ರೂ.ಗಳು ಇತ್ತು. 1996-97ರಲ್ಲಿ ಆ ಆದಾಯ 5913.940 ಲಕ್ಷ ರೂ. ಗಳಿಗೆ ಹೆಚ್ಚಿತು. ಈ ವರ್ಷವೂ ಸರ್ಕಾರದ ಹೆಚ್ಚಿನ ಆದಾಯವನ್ನು ತರಲು ಪ್ರಯತ್ನ ಮಾಡುತ್ತಿದೆ. ಇನ್ನೂ ಈ ಆರ್ಥಿಕ ವರ್ಷ ಮುಗಿಯಲು 9 ತಿಂಗಳು ಇದೆ. ನಾವು ಈಗಲೇ ಇಂತಿಷ್ಟು

ಆದಾಯ ಬರುತ್ತದೆ ಎಂದು ಅಸೆಸ್ ಮಾಡಲಿಕ್ಕೆ ಸಾಧ್ಯವಿಲ್ಲ. ಲೋಪದೋಷಗಳನ್ನು ಸರಿಪಡಿಸಲಿಕ್ಕೆ ಸರ್ಕಾರ ಎಲ್ಲಾ ರೀತಿಯ ಕ್ರಮಗಳನ್ನೂ ತೆಗೆದುಕೊಳ್ಳುತ್ತಿದೆ ಎಂದು ತಿಳಿಸಬಯಸುತ್ತೇನೆ.

ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ.

283 - ಶ್ರೀ ಎಸ್. ಯೋಗೀಶ್‌ಭಟ್ (ಮಂಗಳೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕುಡಿಯವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಈ ಬಗ್ಗೆ ವಲಯ11ರ ವಿತರಣಾ ವ್ಯವಸ್ಥೆಯನ್ನು ಯಾವಾಗ ಮಾಡಿ ಮುಗಿಸಲಾಗುವುದು. ಹಾಗೂ ಕದ್ರಿ ಪಂಪಿಂಗ್ ಸ್ಟೇಷನ್ ಮತ್ತು ಬೆಂದೂರು ಶುದ್ಧೀಕರಣ ಘಟಕದಲ್ಲಿ ಪಂಪ್ ಹೌಸಿಗೆ ವಿದ್ಯುತ್ ಜೋಡಣೆ ವ್ಯವಸ್ಥೆಯನ್ನು ಯಾವಾಗ ಮಾಡಲಾಗುವುದು.

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

1) ಬಂದಿದೆ.

2) ವಲಯ 11ರ ವ್ಯವಸ್ಥೆಯನ್ನು ಮಾರ್ಚ್ 98ರ ಅಂತ್ಯದೊಳಗೆ ಮುಗಿಸಲು ಉದ್ದೇಶಿಸಲಾಗಿದೆ. ಈಗಾಗಲೇ ಕದ್ರಿ ಪಂಪಿಂಗ್ ಸ್ಟೇಷನ್‌ನಲ್ಲಿ ಒಂದು ಹೆಚ್ಚುವರಿ 50 ಹೆಚ್.ಪಿ. ಅಶ್ವಶಕ್ತಿಯ ನೀರಿನ ಪಂಪ್‌ನ್ನು ಅಳವಡಿಸಲಾಗಿರುತ್ತದೆ. ಸದ್ರಿ ಪಂಪುಗಳಿಗೆ ವಿದ್ಯುತ್ ಸಂಪರ್ಕಿಸಲು ಮಹಾನಗರಪಾಲಿಕೆಯಿಂದ ಸಬ್‌ಸ್ಟೇಷನ್ ನಿರ್ಮಿಸುವ ಕ್ರಮವನ್ನು ಕೈಗೊಂಡಿದ್ದು, ಸದ್ಯದಲ್ಲೇ ವಿದ್ಯುತ್ ಸಂಪರ್ಕ ಕಲ್ಪಿಸಿ ಪಂಪುಗಳನ್ನು ಚಾಲನೆಗೊಳಿಸಲಾಗುವುದು ಹಾಗೂ ಬೆಂದೂರು ಪಂಪು ಹೌಸಿಗೆ ವಿದ್ಯುತ್‌ಚ್ಛಕ್ತಿ ಮಂಜೂರಾತಿ ದೊರೆತ ನಂತರ ಚಾಲ್ತಿಗೊಳಿಸಲಾಗುವುದು.

ಶ್ರೀ ಎಸ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ಮಂಗಳೂರಿನಲ್ಲಿ ಒಂದು ವಿಚಿತ್ರವಾದ ಪರಿಸ್ಥಿತಿ ಉದ್ಭವವಾಗಿದೆ. ಹತ್ತಿರದಲ್ಲೇ ಇರುವ ನದಿ ತಂಬಿ ತುಳುಕಿ ಹರಿಯುತ್ತಿದೆ. ಇನ್ನೊಂದು ಕಡೆ ಧಾರಾಕಾರವಾದ ಮಳೆ ಬರುತ್ತಿದೆ. ಆದರೆ ಅನೇಕ ಡಿವಿಜನ್‌ಗಳಲ್ಲಿ ಮನೆಗಳಲ್ಲಿ ನಲ್ಲಿ ನೀರನ ಕೊಳಾಯಿಯನ್ನು ತಿರುಗಿಸಿದಲ್ಲಿ ಒಂದೇ ಒಂದು ಹನಿ ನೀರೂ ಕೂಡ ಬರುತ್ತಿಲ್ಲ. ವಾರಗಟ್ಟಲೆ ನೀರಿಲ್ಲದಂತಾಗಿದೆ. ವಿತರಣಾ ವ್ಯವಸ್ಥೆ ಸಮರ್ಪಕವಾಗಿ ಆಗದಿರುವುದರಿಂದ ಈ ರೀತಿ ಆಗುತ್ತಿದೆ. ಕಳೆದ ಹಲವು ವರ್ಷಗಳಿಂದ ನಾವು ಇದರ ಬಗ್ಗೆ ಪದೇ ಪದೇ ಒತ್ತಾಯ ಮಾಡುತ್ತಿದ್ದೇವೆ. ಆದರೂ ಕೂಡ ಎಷ್ಟು ಕ್ಷಿಪ್ರಗತಿಯಲ್ಲಿ ಅದನ್ನು ನಿವಾರಣೆ ಮಾಡಬೇಕೋ ಆ ರೀತಿ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ನಾನು ಮಾನ್ಯ ಸಚಿವರ ಗಮನವನ್ನು ಸೆಳೆಯುವುದೇನೆಂದರೆ, ಜೋನ್ 11ರ ಬಗ್ಗೆ ತಾವೇನು ಹೇಳಿದ್ದೀರಿ, ಅದರ ಬಗ್ಗೆ ನಾವು ಒಂಭತ್ತು ತಿಂಗಳಿನಿಂದಲೂ ಕೇಳುತ್ತಿದ್ದೆವು. ಸುಮಾರು 15 ಡಿವಿಜನ್‌ಗಳಿಗೆ ಇವತ್ತು ನೀರು ಸರಬರಾಜು ಆಗಿ ಕನಿಷ್ಠ ದಿವಸಕ್ಕೆ 1-2 ಗಂಟೆಗಳಾದರೂ ನೀರು